ದಿನಾಂಕಃ **23.03.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಡಿ.ಟಿ. ವಕೀಲರಿಂದಃ

ದಾವಾ ಸ್ವತ್ತನ್ನು ನಾನು ನೋಡಿರುವುದಿಲ್ಲ. ನಮ್ಮ ಮನೆಯ ದಕ್ಷಿಣಕ್ಕೆ ಹಾಲಿನ ಡೈರಿ ಇರುತ್ತದೆ. ಹಾಲಿನ ಡೈರಿ ಗೋಡೆ ಮತ್ತು ನಮ್ಮ ಮನೆಯ ಗೋಡೆ ಒಂದಕ್ಕೊಂದು ಹೊಂದಿ ಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಮನೆಯ ಬಾಗಿಲು ದಕ್ಷಿಣ ದಿಕ್ಕಿಗೆ ಇರುತ್ತದೆ ನಮ್ಮ ಮನೆಯ ಮುಂದೆ ನಮಗೆ ಸೇರಿದ ಖಾಲಿ ಜಾಗ ಇರುತ್ತದೆ ಎಂದು ಉತ್ತರಿಸುತ್ತಾರೆ. ಹಾಲಿನ ಡೈರಿಯಿಂದ ನಮ್ಮ ಮನೆಯ ಮಧ್ಯೆ ಎಷ್ಟು ಖಾಲಿ ಜಾಗ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ-4 ರಡಿಯಲ್ಲಿ ಖರೀದಿ ಮಾಡಿರುವಂತಹ ಸ್ವತ್ತಿನಲ್ಲಿ 4 ಮನೆಗಳು ಮತ್ತು ಖಾಲಿ ಜಾಗ ಇರುತ್ತದೆ. ನಿಡಿ-4 ರಲ್ಲಿ ದಕ್ಷಿಣಕ್ಕೆ ನಮೂದು ಮಾಡಿರುವ ಕಲ್ಲಟ್ಟಿ ಭೀಮಪ್ಪ ಎಂದರೆ ವಾದಿಯ ತಾತ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ-4 ರಡಿಯಲ್ಲಿ ಖರೀದಿ ಮಾಡಿದ ಸ್ವತ್ತಿನ ದಕ್ಷಿಣಕ್ಕೆ ಇರುವ ಜಮೀನು ವಾದಿಯ ತಾತ ಕಲ್ಲಟ್ಟಿ ಭೀಮಪ್ಪರವರ ಸ್ವಾಧೀನದಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಾತ ಕಲ್ಲಟ್ಟಿ ಭೀಮಪ್ಪರವರು ಹಾಲಿನ ಡೈರಿ ಮತ್ತು ಶಾಲೆಗೆ ಜಮೀನನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

2. ನಿಡಿ-4 ರಡಿಯಲ್ಲಿ ಖರೀದಿ ಮಾಡಿದ ಸ್ವತ್ತಿನ ದಕ್ಷಿಣಕ್ಕೆ ಇರುವಂತಹ ಸ್ವತ್ತು ಸಂಪೂರ್ಣವಾಗಿ ವಾದಿಯ ಕುಟುಂಬಕ್ಕೆ ಸೇರಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ವೀರಭದ್ರಯ್ಯನ ಮಗ ತಿಮ್ಮರಾಯಪ್ಪರವರು ನನ್ನ ಗಂಡನ ತಾತ. ನಿಡಿ-13 ರಲ್ಲಿ ಉತ್ತರ ದಕ್ಷಿಣ ವಿಸ್ತೀರ್ಣ 35 ಗಜಕ್ಕೆ ಬದಲಾಗಿ 36 ಎಂದು ತಿದ್ದಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ

ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ-13 ನ್ನು ನಾವು ಮನೆ ಕಟ್ಟುವ ಸಮಯದಲ್ಲಿ ಪಡೆದುಕೊಂಡಿರುತ್ತೇವೆ. ತಿಮ್ಮರಾಯಪ್ಪರವರು ಕಟ್ಟಿರುವಂತಹ ಮನೆಗಳು ಇರುತ್ತವೆ ಮತ್ತು ನಾನು ಒಂದು ಮನೆಯನ್ನು ಕಟ್ಟಿಕೊಂಡಿರುತ್ತೇನೆ. ನಾನು 2017 ರಲ್ಲಿ ಮನೆ ಕಟ್ಟಿರುತ್ತೇನೆ. ನಾನು ಮನೆ ಕಟ್ಟುವ ಸಮಯದಲ್ಲಿ 2017 ರಲ್ಲಿ ಮನೆ ಕಟ್ಟಲು ಪರವಾನಗೆ ಪಡೆದುಕೊಂಡಿರುವುದಿಲ್ಲ. ನಾನು ಮನೆ ಕಟ್ಟಲು ಸರ್ಕಾರದಿಂದ ಅನುದಾನ ಬಂದಿರುತ್ತದೆ. ಅನುದಾನ ಪಡೆದುಕೊಳ್ಳಲು ಎಷ್ಟು ವಿಸ್ತೀರ್ಣದಲ್ಲಿ ಮನೆಕಟ್ಟುತ್ತೀರ ಎಂದು ನಮೂದು ಮಾಡಿ ಅರ್ಜಿ ಸಲ್ಲಿಸಿರುತ್ತೀರ ಎಂದು ಪ್ರಶ್ನಿಸಿದಕ್ಕೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

3. 2017 ರಲ್ಲಿ ನೀವು ವಾದಿಗೆ ಸೇರಿದ ಸ್ವತ್ತನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟುತ್ತಿರುತ್ತೀರ ಎಂದು ವಾದಿ ನಿಮ್ಮೊಂದಿಗೆ ಜಗಳ ಮಾಡಿ ಪಂಚಾಯಿತಿಗೆ ದೂರ ಸಲ್ಲಿಸಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ವಾದಿ ದೂರ ನೀಡಿದ ಬಗ್ಗೆ ನಮಗೆ ಗೊತ್ತಿರುವುದಿಲ್ಲ ನಾನು ಗೋಡೆ ಕಟ್ಟಿದ ನಂತರ ಪಂಚಾಯಿತಿ ಅಧಿಕಾರಿಗಳು ಬಂದು ತಡೆದಿರುತ್ತಾರೆ ಆದರೆ ಯಾವ ಕಾರಣಕ್ಕಾಗಿ ಎಂದು ಕೇಳಿದರು ಸಹ ಅವರ ನಮಗೆ ಹೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಪಂಚಾಯಿತಿ ಅಧಿಕಾರಿಗಳು ನೀವು ಪರವಾನಗೆ ಪಡೆದುಕೊಳ್ಳದೆ ನಿಮ್ಮ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿ ಸ್ವತ್ತನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟುತ್ತಿರುತ್ತೀರ ಆದ್ದರಿಂದ ಕಟ್ಟಡ ಕಾಮಗಾರಿಯನ್ನು ನಿಲ್ಲಿಸುವಂತೆ ಸೂಚಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನಾನು ಪಂಚಾಯಿತಿ ಅಧಿಕಾರಿಗಳ ಆದೇಶ ಪಾಲನೆ ಮಾಡದೆ ಮನೆ ಕಟ್ಟಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

4. ಕಟ್ಟಡ ಕಾಮಗಾರಿಯನ್ನು ಮುಂದುವರೆಸುವಂತೆ ಪಂಚಾಯಿತಿಯಿಂದ ನನಗೆ ಯಾವುದೇ ಪತ್ರವನ್ನು ನೀಡಿರುವುದಿಲ್ಲ ಈ ಹಂತದಲ್ಲಿ ಸಾಕ್ಷಿಗೆ ಒಂದು ಭಾವಚಿತ್ರವನ್ನು

ತೋರಿಸಿ ನೀವು ಕಟ್ಟಿಸಿರುವ ಕಟ್ಟಡದ ಭಾವಚಿತ್ರ ಎಂದು ಸೂಚಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ್ದರಿಂದ ಸದರಿ ಭಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣುವಂತಹ ಕಟ್ಟಡ ವಾದಿಯ ಸ್ವತ್ತನ್ನು ಒತ್ತುವರಿ ಮಾಡಿ ಕಟ್ಟಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ನಾನು ಕಾನೂನು ಬಾಹಿರವಾಗಿ ನಿಡಿ-1 ರಲ್ಲಿ ಕಾಣುವಂತಹ ಕಟ್ಟಡ ಕಟ್ಟಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ದಾವಾ ಸ್ವತ್ತನ್ನು ಒತ್ತುವರಿ ಮಾಡಿರುವುದರಿಂದ ಒತ್ತುವರಿ ಸ್ವತ್ತನ್ನು ಬಿಟ್ಟುಕೊಡಬೇಕಾಗುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನಮ್ಮ ಜಾಗದಲ್ಲಿ ಕಟ್ಟಡ ಕಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ